# ಮಕ್ಕಳಿಂದ ಹಾಸಿಗೆ ಒದ್ದೆ ಹಾರಿಹೋಯಿತೆ ನಿದ್ದೆ?

**ದೊಡ್ಡವರಾಗುತ್ತಿದ್ದರೂ ಕೆಲ ಮಕ್ಕಳಿಗೆ ಹಾಸಿಗೆಯಲ್ಲಿ ಮೂತ್ರ ಮಾಡುವ ಅಭ್ಯಾಸ ತಪ್ಪಿಹೋಗಿರುವುದಿಲ್ಲ. ವೈದ್ಯಕೀಯ ಪರಿಭಾಷೆಯಲ್ಲಿ ಬೆಡ್ ವೆಟಿಂಗ್ ಅಥವಾ ಎನ್ಯುರೆಸಿಸ್ ಎನ್ನಲಾಗುವ ಈ ಪ್ರಕ್ರಿಯೆ ಸಮಸ್ಯೆ ಎಂದೇ ತಿಳಿಯಬೇಕು.**



**■ ಡಾ. ಅರುಣ ಯಡಿಯಾಳ್**

‘ಡಾಕ್ಟರೇ, ನನ್ನ ಮಗ ಸುಧನ್ವನಿಗೆ ಆರು ವರ್ಷ. ಇನ್ನೂ ದಿನಾ ರಾತ್ರಿ ಹಾಸಿಗೆಯಲ್ಲಿ ಮೂತ್ರ ಮಾಡಿಕೊಳ್ಳುತ್ತಾನೆ. ಇದು ನಮಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ..’

ಸುಧನ್ವನ ತಂದೆ ತಾಯಿ ನನ್ನ ಬಳಿ ಬಂದಾಗ ಅವರಿಗೆ ‘ಬೆಡ್ ವೆಟಿಂಗ್’ ಎಂಬ ಸಮಸ್ಯೆಯ ಬಗ್ಗೆ ತಿಳಿಹೇಳಬೇಕಾಯಿತು.

ಸಾಮಾನ್ಯವಾಗಿ ಹುಟ್ಟುತ್ತಲೇ ಯಾವ ಮಗುವಿಗೂ ತನ್ನ ಮಲಮೂತ್ರದ ವಿಸರ್ಜನಾ ಕ್ರಿಯೆಯ ಮೇಲೆ ನಿಯಂತ್ರಣ ಇರುವುದಿಲ್ಲ. ಆಗೆಲ್ಲಾ ಬಟ್ಟೆ, ಹಾಸಿಗೆಯಲ್ಲಿ ಮಲ–ಮೂತ್ರವಾಗುವುದು ಸಹಜ. ಮಕ್ಕಳು ಬೆಳೆದಂತೆಲ್ಲಾ ಹೇಗೆ ನಡೆಯಲು, ಮಾತಾಡಲು ಕಲಿಯುತ್ತಾರೋ, ಹಾಗೆಯೇ ತಮಗೆ ಬೇಕೆನಿಸಿದಾಗ ಶೌಚಾಲಯಕ್ಕೆ ಹೋಗಿ ಮೂತ್ರ, ಮಲ ಮಾಡಲು ಕಲಿತುಕೊಳ್ಳುತ್ತಾರೆ. ಒಂದು ವರ್ಷದಿಂದ ಹಿಡಿದು ಐದಾರು ವರ್ಷದವರೆಗೂ, ತಂದೆತಾಯಿ, ಮನೆಯವರು ಇದರ ಬಗ್ಗೆ ತರಬೇತಿ ಕೊಟ್ಟು, ಮಕ್ಕಳು ಸರಿಯಾದ ಜಾಗ, ಸಮಯದಲ್ಲೇ ಮೂತ್ರ, ಮಲ ಮಾಡುವಂತೆ, ನಂತರ ಸ್ವಚ್ಛ ಮಾಡಿಕೊಂಡೇ ಹೊರಬರುವಂತೆ ಮಾಡುತ್ತಾರೆ.

ಬೆಳವಣಿಗೆ ಸಹಜವಿರುವ ಮಕ್ಕಳಲ್ಲಿ ಇದೇನು ಅಂಥಾ ಕಷ್ಟಕರ ವಿಷಯವಲ್ಲ. ನಾಲ್ಕೈದು ವರ್ಷದಲ್ಲಿ ತಾವೇ ಮಲಮೂತ್ರವನ್ನು ನಿಯಂತ್ರಿಸಲು ಕಲಿಯುತ್ತಾರೆ. ಆದರೆ ಕೆಲವೊಮ್ಮೆ ರಾತ್ರಿ ಹಾಸಿಗೆಯಲ್ಲಿ ಅಥವಾ ಬಟ್ಟೆಯಲ್ಲಿ ಗೊತ್ತಿಲ್ಲದೆಯೇ ಮೂತ್ರ ಹೋಗುವುದೂ ಇರುತ್ತದೆ.

ಇದು ಚಿಕ್ಕ ಮಕ್ಕಳಲ್ಲಿ ಅತಿ ಸಾಮಾನ್ಯವಾದ ಸಂಗತಿ. ರಾತ್ರಿ ಹಾಸಿಗೆ ಒದ್ದೆ ಮಾಡುವ ತೊಂದರೆ ಸಾಮಾನ್ಯವಾಗಿ ಮೂರು ವರ್ಷದ ಮಕ್ಕಳಲ್ಲಿ ಶೇ. 40, 4 ವರ್ಷದವರಲ್ಲಿ ಶೇ.30, 5 ವರ್ಷದವರಲ್ಲಿ ಶೇ.20, 6 ವರ್ಷದವರಲ್ಲಿ ಶೇ.10, ಹಾಗೂ 18ರ ಮೇಲ್ಪಟ್ಟವರಲ್ಲಿ ಶೇ.1 ಇರುತ್ತದೆ. ಅಂದರೆ ವಯಸ್ಸಾಗುತ್ತಲೇ ತನ್ನಿಂದ ತಾನೇ ಈ ಸಮಸ್ಯೆ ಪರಿಹಾರವೂ ಆಗುತ್ತದೆ ಎಂದರ್ಥ.

ಈ ರೀತಿಯ ವಿಸರ್ಜನೆಯ ತೊಂದರೆಗಳಲ್ಲಿ, ಮೂತ್ರ ವಿಸರ್ಜನೆಯ ತೊಂದರೆ (ENEURESIS)) ಹಾಗೂ ಮಲ ವಿಸರ್ಜನೆಯ ತೊಂದರೆ (ENCOPRESIS) ಎಂಬ ಎರಡು ವಿಧಗಳಿರುತ್ತವೆ. ಇದು ಆ ವ್ಯಕ್ತಿಯ ನಿಯಂತ್ರಣವಿಲ್ಲದೇ ಆಗುವ ಕ್ರಿಯೆ ಆಗಿರುವುದರಿಂದ, ಇದನ್ನು ಅನೈಚ್ಛಿಕ ಅಥವಾ ಅನಿಯಂತ್ರಿಕ ಮೂತ್ರ ವಿಸರ್ಜನೆ ಅಥವಾ ಮೂತ್ರ ಅಸಂಯಮದ ತೊಂದರೆ ಅಂತಲೂ ಕರೆಯಬಹುದು.

## ಅನಿಯಂತ್ರಿತ ಮೂತ್ರ ವಿಸರ್ಜನೆ

ಈ ರೀತಿಯ ಸಮಸ್ಯೆ ಸಹಜ ಬೆಳವಣಿಗೆಯ ಮಕ್ಕಳಲ್ಲಿ, ಐದು ವರ್ಷ ದಾಟಿದ ನಂತರವೂ, ವಾರದಲ್ಲಿ ಎರಡುಮೂರು ಸಾರಿ ಇದ್ದು, ಸತತವಾಗಿ 3 ತಿಂಗಳಾದರೂ ಮುಂದುವರಿದರೆ ಸಮಸ್ಯೆ ಎಂದು ತಿಳಿಯಬೇಕು. ಇದರಿಂದ ವೈಯಕ್ತಿಕ ಸಂಕಟ, ತೊಂದರೆ ಆಗುತ್ತಿದ್ದು, ಮನೆ, ಶಾಲೆ, ಸಂಬಂಧಗಳಲ್ಲಿ ತೊಡಕುಗಳುಂಟಾಗಬಹುದು. ಈ ಕಾಯಿಲೆಯು ಗಂಡು ಮಕ್ಕಳಲ್ಲಿ ಹೆಚ್ಚು. ಅಲ್ಲದೆ ಕುಟುಂಬದಲ್ಲಿ ಯಾರಾದರು ಹತ್ತಿರದವರಿಗೆ